ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 22-26
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕನ್ನಡ ಸಾಹಿತ್ಯ ಚಳವಳಿ ಮತ್ತು ಸಂವೇದನೆ

**ಡಾ. ಭೀಮಾಶಂಕರ ಜೋಷಿ ಕೂಡಲಗಿ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.

***Abstract:***
*"ವಿನಾಶ್ರಯಂ ನ ಶೋಭಂತೇ ಪಂಡಿತಾ ವನಿತಾ ಲತಾಃ" ಎಂಬ ಪ್ರಾಚೀನ ಉಕ್ತಿಯಂತೆ ಆಶ್ರಯವಿಲ್ಲದೆ ಪಂಡಿತರೂ, ವನಿತೆಯರೂ, ಲತೆಗಳೂ ಶೋಭಿಸುವುದಿಲ್ಲ. ಕನ್ನಡ ಸಾಹಿತ್ಯವನ್ನು ಸಿಂಹಾವಲೋಕನದಿಂದ ನೋಡಿದ ಪಕ್ಷದಲ್ಲಿ ಬಹುಮಟ್ಟಿಗೆ ಈ ಮಾತು ನಿಜವೆನಿಸುತ್ತದೆ. ಅರಮನೆ ಗುರುಮನೆಗಳಲ್ಲಿ ಶ್ರೀಮಂತರ ಆಶ್ರಯದಲ್ಲಿ, ಮಠ ಮಂದಿರಗಳಲ್ಲಿ, ಬಸದಿ ವಿಹಾರಗಳಲ್ಲಿ ಕನ್ನಡ ಸಾಹಿತ್ಯ ನಂದನವನವು ಸೊಂಪಾಗಿ ಬೆಳೆದು ಬಂದಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ರಾಜರು ಗ್ರಂಥ ರಚನೆಗೆ ಪ್ರೋತ್ಸಾಹ ನೀಡಿದ್ದಷ್ಟೇ ಅಲ್ಲದೆ ತಾವೂ ಸ್ವತಃ ಕಾವ್ಯರಚನೆಯನ್ನು ಮಾಡಿದ್ದಾರೆ.*

***Keywords:*** *ಕನ್ನಡ ಸಾಹಿತ್ಯ, ಸಾಹಿತ್ಯ ಚಳವಳಿ ಮತ್ತು ಸಂವೇದನೆ, ಕನ್ನಡ ಸಾಹಿತ್ಯ ಚರಿತ್ರೆ.*

**ಪೀಠಿಕೆ**

ಕನ್ನಡ ನಾಡು "ಭೂಪತಿಯು ಕವಿಯಾಗಿ ಕವಿಯು ಚಮೂಪತಿಯಾಗಿ" ಮೆರೆದಿರುವ ಹೆಮ್ಮೆಯ ನಾಡಾಗಿದೆ. ಕನ್ನಡ ನಾಡಿನ ರಾಜರು ಕವಿಗಳಾಗಿ, ಕವಿಗಳಿಗೆ ಆಶ್ರಯದಾತರಾಗಿ, ಕಾವ್ಯ ಆಸ್ವಾಧಿಸುವ ಸಹೃದಯರಾಗಿ, ಸಹೃದಯರಿಗೆ ಸಾಹಿತ್ಯ ತಲುಪಿಸುವ ಹೃದಯವಂತರಾಗಿ ಸಾರ್ಥಕ ಸೇವೆಯನ್ನು ಮಾಡಿದ್ದಾರೆ. ಆದ್ದರಿಂದಲೇ ಕನ್ನಡ ಸಾಹಿತ್ಯ ಇಂದು ಶ್ರೀಮಂತವೂ ಸಮೃದ್ಧವೂ ಆಗಿ ಬೆಳೆದಿದೆ. ಸಣ್ಣ ಪುಟ್ಟ ಪಾಳೆಯಗಾರರಿಂದ ಹಿಡಿದು ಹಿರಿಯ ಚಕ್ರವರ್ತಿಗಳವರೆಗೆ, ಕಿರಿಯ ರಾಜ್ಯಾಧಿಕಾರಿಗಳಿಂದ ಹಿಡಿದು ದಂಡನಾಯಕ, ಸಚಿವರವರೆಗೆ ಎಲ್ಲರೂ ಈ ಸಾಹಿತ್ಯ ಶಾರದೆಯ ಪೂಜೆಯಲ್ಲಿ ಮುಖ್ಯ ಪಾತ್ರವಹಿಸಿದ್ದಾರೆ. ಅನೇಕ ರಾಜವಂಶಗಳೂ, ಪಾಳೆಯಗಾರರ ವಂಶಗಳು ತಮ್ಮ ಶಕ್ತಿಗೆ ತಕ್ಕಂತೆ ಸಾಹಿತ್ಯಕ್ಕೆ ಆಶ್ರಯಕೊಟ್ಟಿವೆ. ಇವರೆಲ್ಲರೂ ಬಾಲ್ಯಾವಸ್ಥೆಲ್ಲಿದ್ದ ಕನ್ನಡವನ್ನು ಪೋಷಿಸಿ ಬೆಳೆಸಿದರು. ಕವಿ ರಾಜರ ನಡುವಣ ಸುಮಧುರ ಸಂಬಂಧ ಸಮೃದ್ಧವಾದ ಸಾಹಿತ್ಯ ಸೃಷ್ಟಿಗೆ ಸಾಕ್ಷಿಯಾಗಿದೆ. ಕವಿಗಳಿಗೆ ರಾಜಸ್ಥಾನ ಅಗತ್ಯ; ರಾಜರುಗಳ ಕೀರ್ತಿಗೆ ಕವಿಗಳು ಅನಿವಾರ್ಯ. ರಾಜರನ್ನು ಆಶ್ರಯಿಸಿ ಕವಿಗಳು ಬೆಳೆದರೆ ಕವಿಗಳಿಗೆ ಆಶ್ರಯ ಕೊಟ್ಟು ರಾಜರು ಉಳಿದರು. ರಾಜಾಶ್ರಯವನ್ನು ಪಡೆದ ಕನ್ನಡ ಸಾಹಿತ್ಯವಾಹಿನಿ ನಾನಾ ಮುಖವಾಗಿ ಹರಿದಿದೆ. ಪದ್ಯಕಾವ್ಯ, ಗದ್ಯಕಾವ್ಯ, ಚಂಪೂಕಾವ್ಯ, ಶಾಸ್ತ್ರಕಾವ್ಯ, ಹೀಗೆ ಹಲವು ವಿಧದ ಸಾಹಿತ್ಯ ಬೆಳೆದು ಬಂದಿದೆ. ಜೈನ, ವೀರಶೈವ, ಬ್ರಾಹ್ಮಣ, ಕ್ಷತ್ರಿಯ ಮೊದಲಾದ ವಿವಿಧ ಮತ, ಜಾತಿಗಳಿಗೆ ಸೇರಿದ ಕವಿಗಳು ಕಾವ್ಯಗಳನ್ನು ರಚಿಸಿದ್ದಾರೆ. ಆದ್ದರಿಂದಲೇ

***Please cite this article as:*** ಭೀಮಾಶಂಕರ ಜೋಷಿ ಕೂಡಲಗಿ. (2024). ಕನ್ನಡ ಸಾಹಿತ್ಯ ಚಳವಳಿ ಮತ್ತು ಸಂವೇದನೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 3(3), 22–26

ಕನ್ನಡ ನುಡಿಯ ತೋಟ ಬಗೆ ಬಗೆಯ ಕಾವ್ಯ ಪುಷ್ಪಗಳಿಂದ ಕಂಗೊಳಿಸುತ್ತಿದೆ.

ಜೀವನವನ್ನು ಸುಗಮವಾಗಿ ಸಾಗಿಸಲು ಹಾಗೂ ಅರ್ಥೈಸಿಕೊಳ್ಳಲು ಅನುಕೂಲಕರವಾದ ಮಾರ್ಗವೇ ಸಾಹಿತ್ಯ ಅಧ್ಯಯನ. ಭಾಷೆ ಬೆಳವಣಿಗೆ ಹೊಂದಿದಂತೆಲ್ಲ ಸಾಹಿತ್ಯವೂ ಅಂಬೆಗಾಲಿಡಲು ಪ್ರಾರಂಭಿಸಿತು. ಎಲ್ಲದಕ್ಕೂ ಮೂಲ ಬುನಾದಿ ಜನಪದವೇ ಆಗಿದೆ. ಜನಪದರು ತಮ್ಮ ಮನೋರಂಜನೆಗಾಗಿ, ಆಯಾಸವನ್ನು ಪರಿಹರಿಸಿಕೊಳ್ಳಲು ದುಡಿಯುವ ಸಂದರ್ಭದಲ್ಲಿ, ಹಬ್ಬ ಹರಿದಿನಗಳಲ್ಲಿ ತಮ್ಮ ಮನಸ್ಸಿನ ಭಾವನೆಗಳನ್ನು ಹೊರಹಾಕುತ್ತಿದ್ದರು. ಯಾರೂ ಕೂಡಾ ಕುಳಿತುಕೊಂಡು ಅದಕ್ಕಾಗಿ ಸಮಯವನ್ನು ಮೀಸಲಿಟ್ಟು ಸಾಹಿತ್ಯ ರಚಿಸಿರಲಿಲ್ಲ; ಹಾಗಾಗಿ ಇದು ಮೌಖಿಕವಾಗಿ ಬೆಳೆದು ಬಂದ ಸಾಹಿತ್ಯವಾಯಿತು. ಹಾಗಾದರೆ ಕನ್ನಡ ಸಾಹಿತ್ಯದಲ್ಲಿ ಕಾವ್ಯ ರಚನೆ ಯಾವಾಗ ಆರಂಭವಾಯಿತೆಂದು ಹೇಳುವುದು ಕಷ್ಟ. ಒಂಬತ್ತನೆಯ ಶತಮಾನಕ್ಕಿಂತ ಹಿಂದಿನ ಯಾವ ಗ್ರಂಥವೂ ಇದುವರೆಗೆ ದೊರೆತಿಲ್ಲ. ಕನ್ನಡ ಸಾಹಿತ್ಯ ಕ್ರಿಸ್ತಶಕದ ಆದಿಭಾಗದಿಂದಲೇ ರಚನೆಯಾದಂತೆ ತಿಳಿದು ಬಂದರೂ ದೊರಕಿರುವ ಆಧಾರಗಳ ದೃಷ್ಟಿಯಿಂದ ಅದರ ನಿಜವಾದ ಪ್ರಾರಂಭಕ್ಕೆ ಒಂಬತ್ತು ಶತಮಾನಗಳೇ ಬೇಕಾದವು. ಈ ಕಾಲಕ್ಕಾಗಲೇ ಕನ್ನಡ ಭಾಷಾ ಸಾಹಿತ್ಯಗಳು ಚೆನ್ನಾಗಿ ಬೆಳೆದಿದ್ದವು. ನಮಗೆ ಸಿಕ್ಕಿರುವ ಮೊದಲ ಗ್ರಂಥ ಕವಿರಾಮಾರ್ಗವೇ ಇದಕ್ಕೆ ಉಲ್ಲೇಖಗಳನ್ನು ಒದಗಿಸುವುದಲ್ಲದೆ ಇದು ಲಕ್ಷಣ ಗ್ರಂಥವಾಗಿರುವುದೇ ಇದನ್ನು ದೃಢಪಡಿಸುತ್ತದೆ. ವಡ್ಡಾರಾಧನೆ ಎಂಬ ಗದ್ಯಕೃತಿಯೂ ಹಲವು ದೃಷ್ಟಿಯಿಂದ ತನ್ನ ಪರಂಪರೆಗೆ ಸಾಕ್ಷಿ ನುಡಿಯುತ್ತದೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 10ನೇ ಶತಮಾನವನ್ನು ವೀರಯುಗ ಎಂದು ವಿದ್ವಾಂಸರು ಕರೆದಿರುವುದಲ್ಲದೆ ಆ ಕಾಲಕ್ಕೆ ಬಂದ ಕೃತಿಗಳೆಲ್ಲವೂ ಕ್ಷಾತ್ರಧರ್ಮ ಮತ್ತು ಅದರ ಮೌಲ್ಯಗಳನ್ನು ವಿವರಿಸುತ್ತವೆ. ಈ ಕಾಲವು ಕನ್ನಡ ಸಾಹಿತ್ಯದ ಉತ್ತುಂಗ ಶಿಖರಗಳಲ್ಲಿ ಒಂದು. ಸಾಮಾನ್ಯವಾಗಿ ಇದು ಸಾಹಿತ್ಯದ ಸುವರ್ಣಯುಗವೆಂದೇ ಪ್ರಸಿದ್ಧವಾಗಿದೆ. ಈ ಕಾಲದಲ್ಲಿ ಜೈನಧರ್ಮವೇ ಪ್ರಬಲವಾಗಿದ್ದುದರಿಂದ ಉಳಿದ ಧರ್ಮಗಳೊಡನೆ ಅದರ ಸ್ಪರ್ಧೆ ಬಹುಮಟ್ಟಿಗೆ ಇರಲಿಲ್ಲ. ಕ್ಷಾತ್ರಧರ್ಮವೂ, ಧಾರ್ಮಿಕ ಚಳುವಳಿಯೂ ಈ ಶತಮಾನದ ಕಾವ್ಯಗಳ ಕಾವ್ಯಧರ್ಮವಾಗಿ ಪರಿಣಮಿಸಿದ್ದು ಈ ಕಾಲದ ಇನ್ನೊಂದು ವಿಶೇಷ. ಕನ್ನಡ–ಸಂಸ್ಕೃತಗಳ ಸುಂದರ ಸಮನ್ವಯವನ್ನು ಸಾಧಿಸಿದ ಮಾರ್ಗೀಯ ಶೈಲಿಯನ್ನು ರೂಪಿಸಿಕೊಂಡ ಈ ಕವಿಗಳು ದೇಸೀಯ ಸೊಬಗನ್ನೂ ಕಾವ್ಯದಲ್ಲಿ ಮೇಳೈಸಿದರು. ಸನ್ನಿವೇಶ, ಭಾವನೆ, ಪಾತ್ರಗಳಿಗೆ ಅನುಗುಣವಾಗಿ ಭಾಷೆಯನ್ನು ದುಡಿಸಿಕೊಂಡರು; ಅಭಿನಯಿಸಿ ತೋರಿಸಿದರು. ಹೀಗಾಗಿ ಈ ಕವಿಗಳು ಮುಂದಿನ ಶತಮಾನಗಳ ಅನೇಕ ಕವಿಗಳ ಮೇಲೆ ಪ್ರಭಾವ ಬೀರಿದರು.

12ನೇ ಶತಮಾನದಲ್ಲಿ ಅರಮನೆಯಲ್ಲಿ ಬೆಳೆದ ಸಾಹಿತ್ಯ ಜನಸಾಮಾನ್ಯರ ನಡುವೆ ಬಂದು ಚಳುವಳಿಯ ರೂಪ ಪಡೆದುಕೊಂಡಿತು. ಪಾಂಡಿತ್ಯ ಪೂರ್ಣ ಸಾಹಿತ್ಯ ಸೃಷ್ಟಿಗಿಂತ ಜನಸಾಮಾನ್ಯರಿಗೆ ಅರ್ಥವಾಗುವ ಸಂಗತಿ ಮುಖ್ಯವೆಂಬ ಧೋರಣೆ ಇವರದ್ದಾಗಿತ್ತು. ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಹಾದಿಯನ್ನೇ ಹಾಕಿಕೊಟ್ಟರು. ಇವರ ಉದ್ದೇಶ ಮತ ಪ್ರಚಾರವೇ ಹೊರತು ಕಾವ್ಯ ರಚನೆಯಲ್ಲ. ತಮ್ಮ ಧರ್ಮ ಬೋಧನೆಯನ್ನು ವಚನಗಳೆಂಬ ಮಾಧ್ಯಮದ ಮೂಲಕ ಸಾಮಾನ್ಯ ಜನರಿಗೂ ಅರ್ಥವಾಗುವ ರೀತಿಯಲ್ಲಿ ರಚಿಸಿದರು. ಇವರಲ್ಲಿ ರಾಜಪ್ರಭುತ್ವವನ್ನೇ ಪ್ರತಿಭಟಿಸಿ ರಾಜರ ಆಸ್ಥಾನವನ್ನು ತೊರೆದವರನೇಕರಿದ್ದಾರೆ. ಇವರು ತಮ್ಮ ಬರವಣಿಗೆಯಲ್ಲಿ ಮಾನವೀಯತೆ, ಸರ್ವಸಮಾನತೆ, ಭಕ್ತಿ ಮತ್ತು ಆಧ್ಯಾತ್ಮವನ್ನು ಸಂಸ್ಥಾಪಿಸಿದರು. ಅದಕ್ಕನುಗುಣವಾಗಿ ಕಥೆ ಹಾಗೂ ಪಾತ್ರಗಳನ್ನು ಸೃಷ್ಟಿಸಿದರು.

ವಚನಕಾರರ ಕಾಲಕ್ಕೆ ಜನರ ನಡುವೆ ಬಂದ ಸಾಹಿತ್ಯ 16ನೇ ಶತಮಾನದ ದಾಸವರೇಣ್ಯರ ಕಾಲಕ್ಕೆ ಜನಸಮೂಹದ ಅಂತರಂಗವನ್ನು ರಾಗ ತಾಳಗಳ ಮುಖೇನ ಕಾಂತಾಸಮ್ಮಿತ ಭಾವದ ಮೂಲಕ ಜನರ ಹೃದಯವನ್ನು ತಟ್ಟಿತು. ಹರಿದಾಸರು ಕನ್ನಡಿಗರ ಪರಮ ಹಿತೈಷಿಗಳು; ಅವರು ಕೇವಲ ಕವಿಗಳಲ್ಲ; ಸಂಗೀತಜ್ಞರು, ದಾರ್ಶನಿಕರು. ಮೇಲಾಗಿ ಮಹಾನುಭಾವಿಗಳು. ಅಂತೆಯೇ ಅವರ ಕೀರ್ತನೆಗಳಲ್ಲಿ ಸಾಹಿತ್ಯದ ಸೌಂದರ್ಯ, ಶಾಸ್ತ್ರದ ಗಾಂಭೀರ್ಯ, ಗಾನದ ಮಾಧುರ್ಯ ಇವುಗಳ ಸುಂದರ ಸಮನ್ವಯವನ್ನು ಕಾಣಬಹುದಾಗಿದೆ. ಸಂಸ್ಕೃತದಲ್ಲಿರುವ ತತ್ವವಿಚಾರ, ಸಂಗೀತ, ಸಾಹಿತ್ಯ, ಯೋಗ ಎಲ್ಲವನ್ನೂ ಬೆಳಗು ಕನ್ನಡಕ್ಕೆ ಸಾರವತ್ತಾಗಿ ತಂದ ಬಹುಮುಖ ಪ್ರತಿಭೆ ಇವರದ್ದಾಗಿದೆ. ಶ್ರುತಿ–ಸ್ಮೃತಿ–ಪುರಾಣೇತಿಹಾಸಗಳ ಸಾರವನ್ನೆಲ್ಲ ಹೀರಿಕೊಂಡು ಭಕ್ತಿ–ಜ್ಞಾನ–ವೈರಾಗ್ಯಗಳನ್ನು ಸಮನ್ವಯಿಸಿ ಸುಲಭವಾದ ಕನ್ನಡ ಭಾಷೆಯಲ್ಲಿ ರಚಿತವಾದ ಈ ದಾಸ ಸಾಹಿತ್ಯ, ಧಾರ್ಮಿಕ ಚಳುವಳಿಯ ಮೂಲಕ ಕನ್ನಡ ಸಾಹಿತ್ಯ ಸುಧೆಯನ್ನು ಜನಸಾಮಾನ್ಯರ ಮನೆ– ಮನಗಳಿಗೆ ಮುಟ್ಟಿಸಿತು.

ಕನ್ನಡ ಸಾಹಿತ್ಯದಲ್ಲಿ ತತ್ವಪದ ಸಾಹಿತ್ಯವು ಒಂದು ವಿಶಿಷ್ಟ ಪರಂಪರೆಯನ್ನು ಹೊಂದಿದೆ. ಸಮಾಜದ ಏಳಿಗೆಗಾಗಿ ಚಳುವಳಿಯ ರೂಪದಲ್ಲಿ ಹುಟ್ಟಿಕೊಂಡ ವಚನಸಾಹಿತ್ಯ ಮತ್ತು ಭಕ್ತಿರೂಪದಲ್ಲಿ ಹುಟ್ಟಿಕೊಂಡ ದಾಸ ಸಾಹಿತ್ಯಗಳೆರಡರ ನಂತರದಲ್ಲಿ ಸಮಾಜವನ್ನು ಸೂಕ್ತ ಮಾರ್ಗಕ್ಕೆ ತರುವಲ್ಲಿ ಶ್ರಮಿಸಿದ ತತ್ತ್ವಪದ ಸಾಹಿತ್ಯದ ಕೊಡುಗೆ ಗಮನಾರ್ಹವಾದುದು. ಸಮಯೋಚಿತವಾಗಿ ಬದುಕಿನ ಪ್ರತಿಯೊಂದು ರಂಗವನ್ನು ಹೊಕ್ಕು ಅಲ್ಲಿನ ಒಳಿತು ಕೆಡಕುಗಳನ್ನು ಹುಡುಕಿ ಧೈರ್ಯದಿಂದ ಬಿಚ್ಚಿ ಎಲ್ಲವನ್ನು ನೇರವಾಗಿ ಹೇಳಿದ್ದಾರೆ. ಇವರು ತಾವು ಕಂಡ ಅಂದಿನ ಸಮಾಜವನ್ನು ವಿಮರ್ಶಿಸುತ್ತಾ ಅದನ್ನು ಸುಧಾರಿಸಲು ಪ್ರಯತ್ನಿಸಿದ್ದಾರೆ. ಹಳ್ಳಿ ಹಳ್ಳಿಗಳಲ್ಲಿ ಭಜನಾ ಪದಗಳಾಗಿ ಈ ತತ್ವಪದ ಸಾಹಿತ್ಯ ಜನಮನವನ್ನು ಸೂರೆಗೊಂಡಿತು.

ಹೊಸದಾಗಿ ಹುಟ್ಟಿಕೊಂಡ ಸಾಹಿತ್ಯ ಪ್ರಕಾರ ತನ್ನ ಹಿಂದಿನ ಸಾಹಿತ್ಯ ಸಂಪ್ರದಾಯವನ್ನು ಅಲ್ಲಗಳೆದು, ಟೀಕಿಸಿ, ಪ್ರತಿಕ್ರಿಯಿಸಿ, ಪ್ರತಿಭಟಿಸಿ, ಎದ್ದು ನಿಲ್ಲುತ್ತವೆ. ಕೆಲವು ಕಾಲ ಬಾಳುತ್ತವೆ. ಅನಂತರ ಅದೂ ಒಂದು ಸಂಪ್ರದಾಯವಾಗುತ್ತದೆ. ಹೀಗೆ ಒಂದು ಕಾಲದ ಸಾಹಿತ್ಯ ವಸ್ತು, ಶೈಲಿ, ತಂತ್ರಗಳಲ್ಲಿ ಹೊಸ ಹೊಸ ಧೋರಣೆಗಳನ್ನು ಪಡೆದು ಸಾಕಷ್ಟು ಕೃಷಿ ನಡೆದು ಅನುಕರಣೆ ಸಹಜವಾಗಿ ಹೋಗುತ್ತವೆ. ಆಗ ಅದರಲ್ಲಿಯ ನ್ಯೂನ್ಯತೆಗಳು ಸ್ಪಷ್ಟವಾಗಿ ಗೋಚರಿಸುತ್ತ ಬಂದಂತೆ ಮತ್ತೆ ಹೊಸ ಮಾರ್ಗದ ಹುಡುಕಾಟ ಪ್ರಾರಂಭವಾಗುತ್ತದೆ. ಈ ಕ್ರಿಯೆ ಸಾಹಿತ್ಯ ಸೃಷ್ಟಿಯಲ್ಲಿ ನಿರಂತರವಾಗಿರುತ್ತದೆ. ಸಾಹಿತ್ಯವು ತನ್ನ ಕಾಲ, ದೇಶ, ಪರಿಸರ ಪ್ರಭಾವಗಳಿಗನಗುಣವಾಗಿ ವಸ್ತು ತಂತ್ರ ಅಭಿವ್ಯಕ್ತಿ ಮಾಧ್ಯಮಗಳಲ್ಲಿ ಬದಲಾವಣೆ ಹೊಂದುವುದು ಸಹಜ. ಅದು ಜೀವಂತ ಸಾಹಿತ್ಯದ ಲಕ್ಷಣ ಅಂತಹ ಪ್ರಕ್ರಿಯೆ ಸಾಹಿತ್ಯ ನಿರ್ಮಿತಿಯಲ್ಲಿ ಅಪೇಕ್ಷಣಿಯ.

ಬ್ರಿಟೀಷರ ಆಗಮನದಿಂದ ಕನ್ನಡ ಸಾಹಿತ್ಯಕ್ಕೆ ಒಂದು ಬಗೆಯ ಹೊಸ ರೂಪ ಬಂದಿತು. ಹೊಸ ಹುರುಪು ಹುಟ್ಟಿತು. ಹೊಸ ಕಳೆ ಏರಿತು. ಜನತೆಯಲ್ಲಿ ಇಂಗ್ಲೀಷ ಭಾಷೆಯ ಸಂಪರ್ಕ ಸಹವಾಸ ಸಾಮಿಪ್ಯಗಳು ಹೆಚ್ಚಿದಂತೆಲ್ಲ ಕನ್ನಡ ಸಾಹಿತ್ಯವು ನಾನಾ ಮುಖವಾಗಿ ಬೆಳೆಯತೊಡಗಿತು. ಹೊಸ ಬಗೆಯ ಸಾಹಿತ್ಯದೃಷ್ಟಿ ಮೊದಲಾಯಿತು. ಇದುವರೆಗೂ ಸಂಸ್ಕೃತ ಭಾಷೆಯಿಂದ ಪರಿಪುಷ್ಟತೆಯನ್ನು ಪಡೆಯುತ್ತಿದ್ದ ಕನ್ನಡ ನುಡಿ, ಇಂಗ್ಲೀಷ ಭಾಷೆಯಿಂದ ಸ್ಫೂರ್ತಿ ಹೊಂದಲಾರಂಭಿಸಿತು. ನಾಟಕ, ಪ್ರಹಸನ, ಕಾದಂಬರಿ, ಸಣ್ಣಕತೆ, ಪ್ರಬಂಧ, ಸರಳರಗಳೆ ಮೊದಲಾದ ಹೊಸಬಗೆಯ ಸಾಹಿತ್ಯದ ವೈವಿಧ್ಯಗಳಿಗೆ ಪ್ರೋತ್ಸಾಹ ದೊರೆಯಿತು. ಇಂಗ್ಲೀಷ ಭಾಷೆಯಿಂದ ಅನೇಕ ಕೃತಿಗಳು ಅನುವಾದಿತವಾದವು. ಹಿಂದಿನಿಂದಲೂ ಸಾಹಿತ್ಯವು ಕೇವಲ ರಾಜಸ್ಥಾನಗಳಲ್ಲಿ

ಶ್ರೀಮಂತರ ಆಶ್ರಯದಲ್ಲಿ ಬೆಳೆದು ಕೆಲವಾರು ಪಂಡಿತ ವರ್ಗದ ಸ್ವತ್ತಾಗಿ ಉಳಿದಿತ್ತು. ಆದರೆ ಕಾಲ ಕಳೆದಂತೆಲ್ಲ ಈ ಸಾಹಿತ್ಯ ರಾಜಸ್ಥಾನವನ್ನು ತ್ಯಜಿಸಿ ಜನಸಾಮಾನ್ಯರೊಂದಿಗೆ ಸೇರಲು ಆರಂಭವಾಯಿತು. ಇಂಗ್ಲೀಷ ವಿದ್ಯಾಭ್ಯಾಸದ ಪರಿಚಯ ಹೆಚ್ಚು ಹೆಚ್ಚಾದಂತೆಲ್ಲ ಸಾಹಿತ್ಯವು ಹಲವಾರು ಜನರ ಸ್ವತ್ತಾಗಿ ಪರಿಣಮಿಸುವ ಗುರುತುಗಳು ಕಾಣಿಸಿಕೊಂಡವು.

ಆಧುನಿಕ ಕನ್ನಡ ಸಾಹಿತ್ಯದ ಅಭಿವೃದ್ಧಿಗೆ ಕನ್ನಡ ಚಳುವಳಿಗಳು ವಿಶೇಷ ಪ್ರಭಾವವನ್ನು ಬೀರಿವೆ. ಚಳುವಳಿಗಳ ಮೂಲಕ ಪ್ರಸ್ತುತಗೊಂಡ ಧೋರಣೆ ಸಮಕಾಲೀನ ಬರಹಗಳಲ್ಲಿ ಪಡಿಮೂಡಿ ಒಂದು ಪ್ರತ್ಯೇಕ ಅಧ್ಯಯನದ ವಿಷಯವಾಗಿಯೇ ರೂಪುಗೊಳ್ಳುವುದನ್ನು ಹೊಸಗನ್ನಡ ಸಾಹಿತ್ಯದ ಬೆಳವಣಿಗೆಯ ಹಂತಗಳಲ್ಲಿ ಗುರುತಿಸಿದ್ದೇವೆ. ಸಾಮಾಜಿಕ ಸಮಕಾಲೀನ ಎಚ್ಚರ ಕೃತಿಗಳಲ್ಲೂ ವ್ಯಕ್ತವಾಗುತ್ತಾ ಬಂದಿರುವುದಕ್ಕೆ ನವೋದಯ, ಪ್ರಗತಿಶೀಲ, ನವ್ಯ ಹಾಗೂ ದಲಿತ ಬಂಡಾಯ ಸಾಹಿತ್ಯಗಳೇ ಸಾಕ್ಷಿಯಾಗಿವೆ.

ನವೋದಯ ಸಾಹಿತ್ಯದಲ್ಲಿ ಪ್ರಕೃತಿಯ ವರ್ಣನೆ, ಪ್ರೀತಿಯ ಸ್ಪಂದನ, ಸಾಮಾಜಿಕ ಪ್ರತಿಕ್ರಿಯೆ, ನಾಡಿನ ಹಾಗೂ ರಾಷ್ಟ್ರದ ಸ್ಥಿತಿ– ಗತಿಗಳ ವರ್ಣನೆ ಮತ್ತು ಪರಂಪರೆಯ ಅಗ್ಗಳಿಕೆ ಇತ್ಯಾದಿಗಳು ಬಹಳಷ್ಟು ಜಾಗವನ್ನು ಆಕ್ರಮಿಸಿವೆ. ವೈಯಕ್ತಿಕ ವೈಶಿಷ್ಟ್ಯಗಳ ಮೊತ್ತವೇ ನವೋದಯದ ಸ್ಥೂಲ ಸ್ವರೂಪ ಎಂದು ಹೇಳಬಹುದು. ಪ್ರಗತಿಶೀಲ ಸಾಹಿತ್ಯದಲ್ಲಿ ಪರಂಪರೆಯ ಗೊಡ್ಡು ಸಂಪ್ರಾದಯಗಳನ್ನು ಧಿಕ್ಕರಿಸಿ ವೈಜ್ಞಾನಿಕ ಸತ್ಯವನ್ನು ಸ್ಥಿರೀಕರಿಸಿದರು. ಧರ್ಮ, ದೇವರು ಜಾತಿಗಳ ಹೆಸರಿನಲ್ಲಿ ನಡೆಯುವ ಶೋಷಣೆಯನ್ನು ಧಿಕ್ಕರಿಸಿ ಧರ್ಮವನ್ನು ವೈಚಾರಿಕ ಹಿನ್ನಲೆಯಲ್ಲಿ ವಿವರಿಸಿದರು. ಕಲೆಗಾಗಿ ಕಲೆ ಎನ್ನುವ ವಾದವನ್ನು ತಳ್ಳಿಹಾಕಿ ಆ ಸ್ಥಾನದಲ್ಲಿ ಬದುಕಿಗಾಗಿ ಕಲೆ ಎನ್ನುವ ದೃಷ್ಟಿಯನ್ನು ಖಚಿತಗೊಳಿಸಿದರು. ನವ್ಯ ಸಾಹಿತ್ಯ ಪಾಶ್ಚಾತ್ಯ ಆಧುನಿಕ ತಾತ್ವಿಕ ಚಿಂತನೆಗಳಾದ ಅಸ್ತಿತ್ವವಾದ, ಅಸಂಗತವಾದಗಳನ್ನು ರೂಢಿಸಿಕೊಂಡು ಬೆಳೆಯಿತು. ವಾಸ್ತವಿಕ ಅಸ್ತಿತ್ವ ಬಾಹ್ಯ ಜಗತ್ತಿನಲ್ಲಿರದೆ ಮನುಷ್ಯನ ಪ್ರಜ್ಞೆಯಲ್ಲಿದೆ ಎಂಬುದನ್ನು ಸಾರಿತು. ದಲಿತ ಸಾಹಿತ್ಯದಲ್ಲಿ ಕಲೆಗಾರಿಕೆಗಿಂತಲೂ ವಾಸ್ತವ ಬದುಕಿನ ಬರ್ಬರತೆ ಕಾಣುತ್ತದೆ. ಕಲೆಗಾರಿಕೆಯೇ ಸಾಹಿತ್ಯವಲ್ಲ ಬದುಕು ಸತ್ಯ ಎಂಬುದನ್ನು ಸಾರಿತು. ಅಸ್ಪ್ರಶ್ಯತೆ, ದಾಸ್ಯತನ, ವಿಷಮತೆ, ದುಃಖ ಇತ್ಯಾದಿಗಳನ್ನು ಧಿಕ್ಕರಿಸುವ ಪ್ರಜ್ಞೆ ದಲಿತ ಸಾಹಿತ್ಯದಲ್ಲಿ ಕಂಡುಬರುತ್ತದೆ.

ಸಮಾಜವೆಂದರೆ ಒಂದು ತೆರನಾದ ಆಚಾರ, ವಿಚಾರ, ನಂಬಿಕೆ, ನಡವಳಿಕೆಯುಳ್ಳ ಜನರ ಒಂದು ಸಮೂಹ. ಈ ಸಮೂಹ ಅಂದಿನ ಜನತೆಯ ಮನೋಭಾವಕ್ಕನುಗುಣವಾಗಿ ಪರಿಸರದ ಪ್ರಭಾವದ ಪರಿಣಾಮವಾಗಿ ಆಯಾ ಕಾಲದ ಮೌಲ್ಯಗಳಿಗನುಗುಣವಾಗಿ ರೂಪಿತಗೊಳ್ಳುತ್ತದೆ. ಮನುಷ್ಯ ಸಮಾಜಜೀವಿ. ಮನುಷ್ಯನನ್ನು ಬಿಟ್ಟು ಸಮಾಜವಿಲ್ಲ; ಸಮಾಜ ಬಿಟ್ಟು ಮನುಷ್ಯನಿಲ್ಲ. ಇವು ಪರಿಸರ ಪೂರಕವಾದ ಸಂಬಂಧಗಳು ಸ್ಥಗಿತಗೊಂಡ ಸಮಾಜಕ್ಕೆ ಚಾಲನೆ ನೀಡಬೇಕಾದರೆ ಅದರ ಮೂಲ ಚೂಲಗಳನ್ನು ಜಾಲಾಡಬೇಕಾಗುತ್ತದೆ. ಈ ಕಾರ್ಯಕ್ಕೆ ಸಾಹಿತ್ಯವು ಸಮರ್ಥ ಮಾಧ್ಯಮವಾಗುತ್ತದೆ. ಸಾಹಿತ್ಯ ಜೀವನದ ಪ್ರತಿಬಿಂಬ ಎನ್ನುವಂತೆ ಕಲೆಯನ್ನು ಅಳವಡಿಸಿಕೊಂಡ ಕವಿಗಳು ಸಾಮಾನ್ಯವಾಗಿ ಸಮಕಾಲೀನ ಸಮಾಜದ ಪ್ರತಿನಿಧಿಯಾಗುತ್ತಾರೆ. ತತ್ಕಾಲದ ಸಾರ್ವಕಾಲಿಕ ಅಂಶಗಳನ್ನು ಗಮನಿಸಿ ಸಾಹಿತ್ಯ ರೂಪದಲ್ಲಿ ಬರೆಯುವುದು ಸಹಜವಾಗಿರುತ್ತದೆ.

ಒಟ್ಟಿನಲ್ಲಿ ಪ್ರಾಚೀನ ಕಾಲದಿಂದಲೂ ಇಲ್ಲಿಯವರೆಗೆ ಅವ್ಯಾಹತವಾಗಿ ಹರಿದು ಬಂದ ಕನ್ನಡ ಸಾಹಿತ್ಯವು ಆಯಾ ಕಾಲದ ಸಂದರ್ಭ ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ವಿಶೇಷ ಚಳುವಳಿಗಳ ಮೂಲಕ ಹೊಸ ಹೊಸ ವಿಚಾರಗಳನ್ನು ಅಭಿವ್ಯಕ್ತಿಸಿ ಜನಜಾಗೃತಿಯನ್ನುಂಟು ಮಾಡುವಲ್ಲಿ ಮಹತ್ತರ ಪಾತ್ರವನ್ನು ವಹಿಸಿದೆ ಎಂದು ಹೇಳಬಹುದು.

**ಆಕರ ಗ್ರಂಥಗಳು**


- ಆಶಾಕುಮಾರಿ ಪಿ.ಬಿ. (2011). *ಕನ್ನಡ ಸಾಹಿತ್ಯ ಮೊದಲ ಹೆಜ್ಜೆ.* ಚೇತನ ಬುಕ್‌ಹೌಸ್.
- ಮಾಧವ ಪೆರಾಜೆ. (2017). *ಪಂಪಪೂರ್ವಯುಗದ ಕನ್ನಡ ಕವಿಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಮುಗುಳಿ, ರಂ.ಶ್ರೀ. (2014). *ಕನ್ನಡ ಸಾಹಿತ್ಯಚರಿತ್ರೆ.* ಗೀತಾ ಬುಕ್‌ಹೌಸ್.
- ರಾಗೌ. (2015). *ಪ್ರಾಚೀನ ಕಾವ್ಯಚಿಂತನ.* ಕನ್ನಡ ಪುಸ್ತಕ ಪ್ರಾಧಿಕಾರ.
- ವೆಂಕಟರಾಮಪ್ಪ ಕೆ. (1960). *ಕನ್ನಡ ಸಾಹಿತ್ಯ.* ಮೈಸೂರು ವಿಶ್ವವಿದ್ಯಾಲಯ